ಒ.ಎಸ್. ನಂ.75/2013
ಪಿಡಬ್ಲು-2

ದಿನಾಂಕ 28.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

2ನೆ ವಾದಿಯ ತಾಯಿಯ ಹೆಸರು ಶಾಂತಮ್ಮ ಎಂದರೆ ಸರಿ. ವಾದಿ ನಂ.1ಎ ರವರು ಅಕ್ಕಲಕೋಟ ತಾಲೂಕಿನ ದುದನಿ ಗ್ರಾಮದಲ್ಲಿರುತ್ತಾರೆ ಎಂದರೆ ಸರಿ. ವಾದಿಯರು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ನನ್ನ ತಂದೆ ವೀರಭದ್ರಪ್ಪರವರಿಗೆ ಇಬ್ಬರು ಹೆಂಡತಿಯರಿದ್ದು ಮೊದಲನೆ ಹೆಂಡತಿ ಹೆಸರು ರತ್ನಮ್ಮ ಮತ್ತು ಎರಡನೆ ಹೆಂಡತಿಯ ಹೆಸರು ಶಾಮಬಾಯಿ ಎಂದರೆ ಸರಿ. ನನ್ನ ತಾಯಿಯ ಹೆಸರು ಶಾಮಬಾಯಿ. ರತ್ನಮ್ಮಳಿಗೆ ಮಾನಪ್ಪ, ಶಿರಸಣ್ಣ, ಭೀಮಣ್ಣು ಮತ್ತು ನಿಂಗಣ್ಣ ಎಂಬ ಮಕ್ಕಳಿರುತ್ತಾರೆ.

ನನ್ನ ಹಾಗೂ ಮಾನಪ್ಪನ ನಡುವೆ ಆಸ್ತಿ ವಿಚಾರವಾಗಿ ತಕರಾರು ಆಗಿರುತ್ತದೆ ಎಂದರೆ ಸರಿ. ಈ ದಾವೆ ಹಾಕುವ ಮೊದಲೆ ಆಸ್ತಿ ವಿಚಾರವಾಗಿ ತಕರಾರು ಆಗಿರುತ್ತದೆ ಎಂದರೆ ಸರಿ. ನನ್ನ ಹಾಗೂ 2ನೆ ಪ್ರತಿವಾದಿಯ ಸಂಬಂಧ ಸರಿಯಾಗಿಲ್ಲ ಎಂದರೆ ನಿಜ. ಸರಸ್ವತಿ, ಶಿರಸಮ್ಮ, ಶಾಂತಮ್ಮ ಮತ್ತು ಮಾನಪ್ಪ ನನ್ನ ಖಾಸ ಸಹೋದರ ಸಹೋರಿಯರು ಎಂದರೆ ಸರಿ. ಸರಸ್ವತಿ, ಶಿರಸಮ್ಮ, ಶಾಂತಮ್ಮ ಮತ್ತು ಮಾನಪ್ಪರವರ ಸಂಬಂಧ ಚೆನ್ನಾಗಿ ಇತ್ತು ಎಂದರೆ ಸರಿ.

2ನೆ ಪ್ರತಿವಾದಿ ವೀರಭದ್ರಪ್ಪನ ಮಗನಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ 2ನೆ ಪ್ರತಿವಾದಿಯ ಸಂಬಂಧ ಸರಿಯಾಗಿಲ್ಲದ ಕಾರಣ ವಾದಿಯರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ